## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯ ಚುನಾವಣಾ ಆಯೋಗಕ್ಕೆ 2018-19ನೇ ಸಾಲಿನ ಅನುದಾನದ 2ನೇ ಕಂತನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:

1. ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕರ್ನಾಟಕ ಇವರ ಪತ್ರ ಸಂಖ್ಯೆ:ರಾಚುಆ. ಲೆಕ್ಕ/2018-19, ದಿನಾಂಕ:06-07-2018.
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 171 ತಾಪಸ 2017, ಬೆಂಗಳೂರು, ದಿನಾಂಕ:26-04-2018.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರ ಚುನಾವಣಾ ಆಯೋಗದ ಪತ್ರದಲ್ಲಿ ರಾಜ್ಯ ಚುನಾವಣಾ ಆಯೋಗವು ವೇತನೇತರ ಅನುದಾನದ ಎರಡನೇ ಕಂತನ್ನು ಬಿಡುಗಡೆ ಮಾಡಲು ಈ ಕೆಳಕಂಡಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಮುಖ್ಯ ಲೆಕ್ಕ ಶೀರ್ಷಿಕೆ:2515-00-101-0-11 | | | | ಮುಖ್ಯ ಲೆಕ್ಕ ಶೀರ್ಷಿಕೆ:2515-00-101-0-17 | | | |
|---|---|---|---|---|---|---|---|
| ಉಪ ಲೆಕ್ಕ ಶೀರ್ಷಿಕೆ ಸಂಕೇತ | ವಿವರ | ಆಯವ್ಯಯದಲ್ಲಿ ಒದಗಿಸಲಾದ ಅನುದಾನ (ರೂ.ಲಕ್ಷಗಳಲ್ಲಿ) | ರಾಜ್ಯ ಚುನಾವಣಾ ಆಯೋಗಕ್ಕೆ ಬಿಡುಗಡೆ ಯಾಗಬೇಕಾಗಿರುವ ಅನುದಾನ (ರೂ.ಲಕ್ಷಗಳಲ್ಲಿ) (2ನೇ ಕಂತು) | ಉಪ ಲೆಕ್ಕ ಶೀರ್ಷಿಕೆ ಸಂಕೇತ | ವಿವರ | ಆಯವ್ಯಯ ದಲ್ಲಿ ಬಿಡುಗಡೆ ಮಾಡಿರುವ ಅನುದಾನ (ರೂ.ಲಕ್ಷಗಳಲ್ಲಿ) | ರಾಜ್ಯ ಚುನಾವಣಾ ಆಯೋಗಕ್ಕೆ ಬಿಡುಗಡೆಯಾಗಬೇಕಾ ಗಿರುವ ಅನುದಾನ (ರೂ.ಲಕ್ಷಗಳಲ್ಲಿ) (2ನೇ ಕಂತು) |
| 059 | ಜಿಲ್ಲಾ/ ತಾಲ್ಲೂಕು/ ಇತರೆ ಚುನಾವಣಾ ವೆಚ್ಚಗಳು | 645.00 | 161.25 | 041 | ಪ್ರಯಾಣ ವೆಚ್ಚಗಳು | 5.00 | 1.25 |
| | | | | 051 | ಸಾಮಾನ್ಯ ವೆಚ್ಚಗಳು | 84.00 | 21.00 |
| | | | | 071 | ಕಟ್ಟಡ ವೆಚ್ಚಗಳು | 50.00 | 12.50 |
| | | | | 195 | ಸಾರಿಗೆ ವೆಚ್ಚಗಳು | 27.00 | 6.75 |
| | | | | 021 | ವೈದ್ಯಕೀಯ ವೆಚ್ಚದ ಮರುಪಾವತಿ | 15.00 | 3.75 |
| | | | | | ಒಟ್ಟು: | **181.00** | **45.25** |

ಮೇಲೆ ಓದಲಾದ (2)ರ ಆದೇಶದಲ್ಲಿ 2018-19ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ: 2515-00-101-0-11 ಮತ್ತು 2515-00-101-0-17ಗಳಿಗೆ ರೂ.645.00ಲಕ್ಷಗಳು ಹಾಗೂ ರೂ.180.00ಲಕ್ಷಗಳನ್ನು ಒದಗಿಸಿರುವ ಅನುದಾನದಲ್ಲಿ ಸದರಿ ಲೆಕ್ಕ ಶೀರ್ಷಿಕೆಗಳಿಗೆ ಕ್ರಮವಾಗಿ ರೂ.161.25ಲಕ್ಷ ಹಾಗೂ ರೂ.45.25ಲಕ್ಷಗಳನ್ನು ಮೊದಲನೇ ಕಂತಾಗಿ ಖಜಾನೆ-2 ಮೂಲಕ ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (1)ರ ರಾಜ್ಯ ಚುನಾವಣಾ ಆಯೋಗ ರವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಲೆಕ್ಕ ಶೀರ್ಷಿಕೆ:2515-00-101-0-11 ಮತ್ತು 2515-00-101-0-17ಗಳಲ್ಲಿ ಬಾಕಿ ಉಳಿದ ರೂ.483.75 ಲಕ್ಷಗಳು ಹಾಗೂ ರೂ.135.75ಲಕ್ಷಗಳಲ್ಲಿ 2ನೇ ಕಂತಿನ ರೂಪದಲ್ಲಿ ಸದರಿ ಲೆಕ್ಕ ಶೀರ್ಷಿಕೆಗಳಿಗೆ ಕ್ರಮವಾಗಿ ರೂ.161.25ಲಕ್ಷ ಹಾಗೂ ರೂ.45.25ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 171 ತಾಪಸ 2017, ಬೆಂಗಳೂರು, ದಿನಾಂಕ:16-08-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2018-19ನೇ ಸಾಲಿನಲ್ಲಿ ಆರ್ಥಿಕ ಇಲಾಖೆಯು ಆಯವ್ಯಯದ ಲೆಕ್ಕ ಶೀರ್ಷಿಕೆ:2515-00-101-0-11 ಮತ್ತು 2515-00-101-0-17ಗಳಿಗೆ ಕ್ರಮವಾಗಿ ರೂ.645.00ಲಕ್ಷಗಳು ಹಾಗೂ ರೂ.180.00ಲಕ್ಷಗಳನ್ನು ಒದಗಿಸಿದ್ದು, ಸದರಿ ಲೆಕ್ಕ ಶೀರ್ಷಿಕೆಗಳಿಗೆ 2ನೇ ಕಂತು ಅನುದಾನ ಕ್ರಮವಾಗಿ ರೂ.161.25ಲಕ್ಷ ಹಾಗೂ ರೂ.45.25ಲಕ್ಷಗಳ ಅನುದಾನವನ್ನು ಖಜಾನೆ-2 ಮೂಲಕ ಬಿಡುಗಡೆಗೊಳಿಸಲು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 4 ಟಿಎಫ್‌ಪಿ 2018, ದಿನಾಂಕ: 24-07-2018 ರಲ್ಲಿ ಆಯಾಯ ಇಲಾಖೆ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ನೀಡಿರುವ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ವಿ.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

ಯೋಜನಾ ನಿರ್ದೇಶಕರು(ಖಜಾನೆ-2), ವಾಣಿಜ್ಯ ತೆರಿಗೆ ಇಲಾಖೆ ಕಟ್ಟಡ, 7ನೇ ಮಹಡಿ, ಗಾಂಧಿನಗರ, ಬೆಂಗಳೂರು-1.

**ಪ್ರತಿಯನ್ನು:**

1. ಮಹಾಲೇಖಪಾಲರು, ಕರ್ನಾಟಕ ವೃತ್ತ, ಬೆಂಗಳೂರು.
2. ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಂಡಳಿ ಕಟ್ಟಡ (ಹಿಂಭಾಗ) 1ನೇ ಮಹಡಿ, ನಂ-8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು-52.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
4. ಉಪಕಾರ್ಯದರ್ಶಿ(ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.
5. ಮೇಲ್ವಿಚಾರಕರು, ಗಣಕಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
6. ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತ.

# ಅನುಬಂಧ

(ರೂ.ಲಕ್ಷಗಳಲ್ಲಿ)

**ಮುಖ್ಯ ಲೆಕ್ಕ ಶೀರ್ಷಿಕೆ:2515-00-101-0-11**

| ಉಪ ಲೆಕ್ಕ ಶೀರ್ಷಿಕೆ ಸಂಕೇತ | ವಿವರ | ಆಯವ್ಯಯದಲ್ಲಿ ಒದಗಿಸಲಾದ ಅನುದಾನ | ರಾಜ್ಯ ಚುನಾವಣಾ ಆಯೋಗಕ್ಕೆ ಬಿಡುಗಡೆಯಾಗಿರುವ ಅನುದಾನ (1ನೇ ಕಂತು) | ರಾಜ್ಯ ಚುನಾವಣಾ ಆಯೋಗಕ್ಕೆ ಬಿಡುಗಡೆ ಯಾಗಬೇಕಾಗಿರುವ ಅನುದಾನ (2ನೇ ಕಂತು) |
|---|---|---|---|---|
| 059 | ಜಿಲ್ಲಾ/ ತಾಲ್ಲೂಕು/ ಇತರೆ ಚುನಾವಣಾ ವೆಚ್ಚಗಳು | 645.00 | 161.25 | 161.25 |
| ಒಟ್ಟು: | | **645.00** | **161.25** | **161.25** |

**ಮುಖ್ಯ ಲೆಕ್ಕ ಶೀರ್ಷಿಕೆ:2515-00-101-0-17**

| ಉಪ ಲೆಕ್ಕ ಶೀರ್ಷಿಕೆ ಸಂಕೇತ | ವಿವರ | ಆಯವ್ಯಯ ದಲ್ಲಿ ಬಿಡುಗಡೆ ಮಾಡಿರುವ ಅನುದಾನ | ರಾಜ್ಯ ಚುನಾವಣಾ ಆಯೋಗಕ್ಕೆ ಬಿಡುಗಡೆಯಾಗಿರುವ ಅನುದಾನ (1ನೇ ಕಂತು) | ರಾಜ್ಯ ಚುನಾವಣಾ ಆಯೋಗಕ್ಕೆ ಬಿಡುಗಡೆಯಾಗಬೇಕಾ ಗಿರುವ ಅನುದಾನ (2ನೇ ಕಂತು) |
|---|---|---|---|---|
| 041 | ಪ್ರಯಾಣ ವೆಚ್ಚಗಳು | 5.00 | 1.25 | 1.25 |
| 051 | ಸಾಮಾನ್ಯ ವೆಚ್ಚಗಳು | 84.00 | 21.00 | 21.00 |
| 071 | ಕಟ್ಟಡ ವೆಚ್ಚಗಳು | 50.00 | 12.50 | 12.50 |
| 195 | ಸಾರಿಗೆ ವೆಚ್ಚಗಳು | 27.00 | 6.75 | 6.75 |
| 021 | ವೈದ್ಯಕೀಯ ವೆಚ್ಚದ ಮರುಪಾವತಿ | 15.00 | 3.75 | 3.75 |
| ಒಟ್ಟು: | | **181.00** | **45.25** | **45.25** |

ವಿ.ವೆಂಕಟೇಶ್

(ವಿ.ವೆಂಕಟೇಶ್)

ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

san((IQ) G O 171 TPS 2017